# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190–ಮಂಗಮ್ಮನಪಾಳ್ಯ

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 26.08.2021 ರಂದು ಬೆಳಿಗ್ಗೆ 11.30 ಘಂಟೆಗೆ Ward DETER Commitee ಅನ್ನು 190–ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು& ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೋಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 | 7795356105 |
| 3 | ಶ್ರೀ ಚಂದ್ರ ರೆಡ್ಡಿ | ಸದಸ್ಯರು | 9900115285 |
| 4 | ಶ್ರೀ ಶ್ರೀನಿವಾಸ ರೆಡ್ಡಿ | ಸದಸ್ಯರು | 9845284088 |
| 5 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು | 9900388078 |
| 6 | ಶ್ರೀ ಗೋಪಿನಾಥ.ಕೆ | ಸದಸ್ಯರು | 9243111520 |
| 7 | ಶ್ರೀ ಕೇಶವ ರೆಡ್ಡಿ | ಸದಸ್ಯರು | 9945265631 |
| 8 | ಶ್ರೀ ರಾಘವೇಂದ್ರ | ಸ್ವಯಂ ಸೇವಕರು | 9845645257 |
| 9 | ಶ್ರೀ ಸುಧೀರ್ ಕುಮಾರ್ ಎನ್ | ಸ್ವಯಂ ಸೇವಕರು | 9880535927 |
| 10 | ಶ್ರೀ ಡಾ॥ ಯೋಗೇಶ್ | ಪ್ರಾ.ಆ.ಕೇಂ (ವೈದ್ಯರು) | 9242832196 |
| 11 | ಶ್ರೀಮತಿ ಡಾ॥ ಮಹಾದೇವಿ | ಪ್ರಾ.ಆ.ಕೇಂ (ವೈದ್ಯರು) | 9980553985 |
| 12 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು | 9844629911 |
| 13 | ಶ್ರೀ ಹೊನ್ನೂರ್ ಬಾಷ | ಕಿರಿಯ ಆರೋಗ್ಯ ಪರಿವೀಕ್ಷಕರು | 9945145661 |
| 14 | ಶ್ರೀ ನಟರಾಜ.ಬಿ.ಸಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾಟರ್ ಇನ್ಸ್‌ಪೆಕ್ಟರ್ | 9900095697 |
| 15 | ಶ್ರೀ ಎಸ್.ಜಿ ನಾರಾಯಣಪ್ಪ | ತೋಟಗಾರಿಕೆ ನಿರ್ವಾಹಕರು | 9739063379 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸದ್ಯಸರು, ಸ್ವಯಂ ಸೇವಕರು ಮತ್ತು ಅಧಿಕಾರಿಗಳ ಸಹಾಕರದೊಂದಿಗೆ ಕೋವಿಡ್–19, 3ನೇ ಅಲೆಯ ಸಿದ್ದತೆಗೆ ಸೂಕ್ತ ಕ್ರಮ ಕೈಗೊಳುವಂತೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.

(ಪು.ತಿ.ನೋ)

Scanned with

- **ಕೋವಿಡ್-19**

1. ಹಿಂದಿನ ಸಭೆಯ ದಿನಾಂಕ: 07.08.2021 ರಂದು ಶ್ರೀ ಚಂದ್ರರೆಡ್ಡಿ, ಕೇಶವ್‌ರೆಡ್ಡಿ, ಸುರೇಶ್‌ರೆಡ್ಡಿ ಮತ್ತು ಸ್ವಯಂ ಸೇವಕರಾದ ರಾಘವೇಂದ್ರ ರವರು ಪ್ರಸ್ತಾಪಿಸಿರುವ ಸ್ಥಳದಲ್ಲಿ ಕಳೆದ ವಾರದ 05 ದಿನಗಳಲ್ಲಿ Special Drive Camp ಅನ್ನು ಯಶಸ್ವಿಯಾಗಿ 1ನೇ ಮತ್ತು 2ನೇ ಡೋಸ್ ಎಲ್ಲಾ ವರ್ಗದ ಜನರಿಗೆ ಲಸಿಕೆಯನ್ನು ನೀಡಲಾಗಿದೆ, ಮುಂದುವರೆದ್ದು, ಮುಂದಿನ ವಾರದಲ್ಲಿ ಈ ಕೆಳಕಂಡ ಸ್ಥಳದಲ್ಲಿ Special Drive Camp ಅನ್ನು ಏರ್ಪಡಿಸಲು ಸುರೇಶ್ ರೆಡ್ಡಿ, ಶ್ರೀನಿವಾಸ್‌ರೆಡ್ಡಿ ಮತ್ತು ಇತರ ಸದಸ್ಯರು ಹಾಗೂ ಸ್ವಯಂ ಸೇವಕರು ರವರ ಒಮ್ಮತದಿಂದ ವಾರ್ಡ್ ಸಭೆಯಲ್ಲಿ ಪ್ರಸ್ತಾಪಿಸಿದರು.
   ಸ್ಥಳ :
   1. ಮುನೇಶ್ವರ ಬಡಾವಣೆ.
   2. ಲಕ್ಷ್ಮೀ ಬಡಾವಣೆ
2. ಶ್ರೀ ಶ್ರೀನಿವಾಸ ರೆಡ್ಡಿ, ಸುರೇಶ್‌ರೆಡ್ಡಿ, ಚಂದ್ರರೆಡ್ಡಿ ಮತ್ತು ಇತರೆ ಸದಸ್ಯರು ವಾರ್ಡ್ ಸಭೆಯಲ್ಲಿ ಮಾತನಾಡುತ್ತಾ, ಇತರೆ ವಾರ್ಡ್‌ನಲ್ಲಿ ಬಿಬಿಎಂಪಿ ವತಿಯಿಂದ ವೈದ್ಯರ ತಂಡವನ್ನು ರಚಿಸಲಾಗಿದ್ದು, ಈ ತಂಡವು ಮನೆ ಮನೆಗೆ ತೆರಳಿ ಕುಟುಂಬ ಸದಸ್ಯರುಗಳ ಆರೋಗ್ಯ ತಪಾಸಣೆ ಹಾಗೂ ಕೋವಿಡ್-19 ಮಾಹಿತಿ ಪಡೆಯುತ್ತಿದ್ದು, ಅದರಂತೆ ಮಂಗಮ್ಮನಪಾಳ್ಯದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸಲು ವಾರ್ಡ್ ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಡಾ|| ಯೋಗೇಶ್ ವೈದ್ಯರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ವಿನೋದ್.ಜಿ ರವರು ವಾರ್ಡ್ ಸಂಖ್ಯೆ: 174 ಹೆಚ್.ಎಸ್.ಆರ್ & 193 ಅರಕೆರೆ ಇತರೆ ಆಯಾ ವಾರ್ಡ್‌ನಲ್ಲಿ ಈ ಕಾರ್ಯಕ್ರಮ ನಡೆಯುತ್ತಿದ್ದು, ಈ ಯೋಜನೆಯ ಪ್ರಮುಖ ಉದ್ದೇಶ ಪ್ರತಿಯೊಬ್ಬರು ಆರೋಗ್ಯವನ್ನು ಸಮೀಕ್ಷೆ ಮಾಡಲು & 100 % ವ್ಯಾಕ್ಸಿನೇಷನ್ ಮೇಲ್ವಿಚಾರಣೆ ಮಾಡಲು ವೈದ್ಯರು ಪ್ರತಿ ಮನೆಗೆ ಭೇಟಿ ನೀಡುತ್ತಾರೆ. ಈ ಯೋಜನೆ ಯಶಸ್ವಿಯಾಗಿರುವುದರಿಂದ ಶೀಘ್ರದಲ್ಲಿ ಕಾರ್ಯಕ್ರಮವನ್ನು ಚಾಲನೆ ನೀಡಲಾಗುವುದರಿಂದ ಸಭೆಯಲ್ಲಿ ತಿಳಿಸಿದರು.
3. ಹಿಂದಿನ ಸಭೆಯ ದಿನಾಂಕ: 07.08.2021 ರಲ್ಲಿ ಸೈಯದ್ ಸಲಾಂ ಮತ್ತು ಇತರೆ ಸದ್ಯಸರು ಪ್ರಸ್ತಾಪಿಸಿರುವಂತೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವಂತೆ ತಿಳಿಸಲಾಗಿದ್ದು, ಈ ವಾರ್ಡ್‌ನಲ್ಲಿ ಲಭ್ಯವಿರದ ಕಾರಣ ಹೊಸದಾಗಿ ಈ ಬಗ್ಗೆ ಡಾ|| ಯೋಗೇಶ್ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ) ರವರು ದಿನಾಂಕ: 25.08.2021 ರಲ್ಲಿ ಆದೇಶ ಸಂಖ್ಯೆ: ಮು.ಆ.ಆ(ಸಾ.ಆ)ಪಿ.ಆರ್/ಪಿ-106/2021-22 ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಲಭ್ಯವಿರದ ವಾರ್ಡ್‌ನಲ್ಲಿ ಸರ್ಕಾರಿ ಬಾಡಿಗೆ ಕಟ್ಟಡಗಳನ್ನು ಗುರುತಿಸಲು ಸೂಚಿಸಲಾಗಿರುತ್ತದೆ. ಅದರಂತೆ ಮಂಗಮ್ಮನಪಾಳ್ಯ ವ್ಯಾಪ್ತಿಯ ಬಂಡೇಪಾಳ್ಯ 100 ಅಡಿ ರಸ್ತೆ ಇಂದಿರಾ ಕ್ಯಾಂಟೀನ್ ಹಿಂಭಾಗದ ಜಾಗ ಗುರುತಿಸಲಾಗಿದ್ದು, ಈ ಕುರಿತು ಆರೋಗ್ಯಧಿಕಾರಿಗಳು ಹಾಗೂ ಮಾನ್ಯ ಜಂಟಿ ಆಯುಕ್ತರ ಗಮನಕ್ಕೆ ತರಲಾಗಿದ್ದು, ಅಗತ್ಯ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ :**

1. ಹಿಂದಿನ ಸಭೆಯ ದಿನಾಂಕ: 07.08.2021ರಲ್ಲಿ ಶ್ರೀ ಚಂದ್ರರೆಡ್ಡಿ ಮತ್ತು ಇತರರು ಸದಸ್ಯರು ಮ್ಯಾನ್‌ಹೋಲ್‌ಗಳನ್ನು ಸರ್ವೆ ಮಾಡಿ ದುರಸ್ಥಿ ಪಡಿಸುವಮತೆ ತಿಳಿಸಿದ್ದು, ಈ ಬಗ್ಗೆ ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಪರವಾಗಿ ಸಭೆಗೆ ಹಾಜರಾದ ನಟರಾಜ್ ವಾಟರ್ ಇನ್ಸ್‌ಪೆಕ್ಟರ್ ರವರು ಕ್ರಮ ವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯ ಮನೇಶ್ವರ ಬಡಾವಣೆಯಲ್ಲಿ ಒಳಚರಂಡಿ ಮಾರ್ಗವನ್ನು ದುರಸ್ಥಿ ಪಡಿಸುವಂತೆ ಶ್ರೀ ಶ್ರೀನಿವಾಸ್‌ರೆಡ್ಡಿ, ಚಂದ್ರರೆಡ್ಡಿ, ಮತ್ತು ಇತರರು ಸದಸ್ಯರು ತಿಳಿಸಿದ್ದು, ಈ ಬಗ್ಗೆ ಸ.ಕಾ.ಅ.ನಿ ಅಗಲಿ ಅಥವ ಸಹಾಯಕ ಅಭಿಯಂತರರು ರವರ ಪರವಾಗಿ ಸಭೆಗೆ ಹಾಜರಾದ ನಟರಾಜ್ ವಾಟರ್ ಇನ್ಸ್‌ಪೆಕ್ಟರ್ ರವರು ಸ್ಥಳವನ್ನು ಪರಿಶೀಲಿಸಲಾಗಿ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

(ಪು.ತಿ.ನೋ)

Scanned with

3. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಮೀಟರ್ ಅಳವಡಿಸದೆ ಅನಧಿಕೃತವಾಗಿ ಸಂಪರ್ಕವನ್ನು ಕಲ್ಪಿಸಿಕೊಂಡವರಿಂದ ತೆರವುಗೊಳಿಸಲಾಗುತ್ತಿದ್ದು, ಆಯಾ ಮನೆಗಳ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿದ್ದು, ತಾತ್ಕಾಲಿಕವಾಗಿ ಸ್ಥಗಿತಗೊಳಿಸುತ್ತಿರುವುದನ್ನು ತಡೆಹಿಡಿದು ಸ್ವಯಂ ಸೇವಕರಾದ ಶ್ರೀ ರಾಘವೇಂದ್ರ ರವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ವಾರ್ಡ್ ಸಭೆಯಲ್ಲಿ ಹಾಜರಿದ್ದ ನಟರಾಜ್ ವಾಟರ್ ಇನ್ಸ್‌ಪೆಕ್ಟರ್ ರವರು ಮೇಲಾಧಿರಿಗಳ ಗಮನಕ್ಕೆ ತಂದು ಅವರ ಸೂಚನೆ ಮೇರೆಗೆ ತಡೆಹಿಡಿದು ಮುಂದಿನ ಸಭೆಗೆ ಸಹಾಯಕ ಅಭಿಯಂತರರನ್ನು ಹಾಜರಾಗುವಂತೆ ಸಭೆಯಲ್ಲಿ ತಿಳಿಸಿದರು.

4. ಹಿಂದಿನ ಸಭೆಯ ದಿನಾಂಕ: 07.08.2021 ರಲ್ಲಿ ಶ್ರೀ ಗೋಪಿನಾಥ್.ಕೆ, ಶ್ರೀ ಚಂದ್ರರೆಡ್ಡಿ ಮತ್ತು ಇತರೆ ಸದಸ್ಯರು ಹಾಗೂ ಸ್ವಯಂ ಸೇವಕರು ರವರು ಒಳಚರಂಡಿ ನೀರನ್ನು ಕೆರೆಗಳಿಗೆ ನುಗ್ಗುತ್ತಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಸಭೆಯಲ್ಲಿ ಗೈರು ಹಾಜರಿದ್ದ ಸಹಾಯಕ ಕಾರ್ಯಪಾಕಲ ಅಭಿಯಂತರರು ಮತ್ತು ಸಹಾಯಕ ಅಭಿಯಂತರರ ಪರವಾಗಿ ಹಾಜರಿದ್ದ ನಟರಾಜ ವಾಟರ್ ಇನ್ಸ್‌ಪೆಕ್ಟರ್ ರವರು ಮುಂದಿನ ಸಭೆಗೆ ಸಹಾಯಕ ಅಭಿಯಂರರು ಹಾಜರಾಗುವಂತೆ ಸಭೆಗೆ ತಿಳಿಸಿದರು.

5. ವಾರ್ಡ್ ವ್ಯಾಪ್ತಿಯ ಸೋಮಸುಂದರಪಾಳ್ಯ ಅಪಾರ್ಟ್‌ಮೆಂಟ್ ಬಳಿ ಮ್ಯಾನ್‌ಹೋಲ್‌ನಿಂದ ನೀರು ಹರಿಯುತ್ತಿದ್ದು, ದುರಸ್ಥಿಗೊಳಿಸುವಂತೆ ಶ್ರೀ ಶ್ರೀನಿವಾಸ್‌ರೆಡ್ಡಿ, ಚಂದ್ರರೆಡ್ಡಿ ಮತ್ತು ಇತರರು ಸದಸ್ಯರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ವಹಿಸುವುದಾಗಿ ನಟರಾಜ್ ರವರು ಸಭೆಗೆ ತಿಳಿಸಿರುತ್ತಾರೆ.

6. ವಾರ್ಡ್ ವ್ಯಾಪ್ತಿಯ ಹೊಸಪಾಳ್ಯದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಲು ಬಿಬಿಎಂಪಿ ವತಿಯಿಂದ ಸರ್ವೆ ಮಾಡಿದ್ದು, ಈ ರಸ್ತೆಯಲ್ಲಿ ಕುಡಿಯುವ ನೀರಿನ ಮತ್ತು ಒಳಚರಂಡಿಯನ್ನು ಹೊಸದಾಗಿ ನಿರ್ಮಿಸುವಂತೆ ಶ್ರೀ ಶ್ರೀನಿವಾಸ್‌ರೆಡ್ಡಿ, ಚಂದ್ರರೆಡ್ಡಿ, ಮತ್ತು ಇತರರು ಸಭೆಗೆ ತಿಳಿಸಿದು ಈ ಬಗ್ಗೆ ನಟರಾಜ ವಾಟರ್ ಇನ್ಸ್‌ಪೆಕ್ಟರ್ ಮೇಲಾಧಿಕಾರಿಗಳ ಗಮನಕ್ಕೆ ತಂದು ಸ್ಥಳ ಪರಿಶೀಲಿಸಿ ಕ್ರಮ ವಹಿಸುವುದಾಗಿ ತಿಳಿಸಿದರು.

**<u>ಕಾಮಗಾರಿ:</u>**

1. ವಾರ್ಡ್ ವ್ಯಾಪ್ತಿಯ ಗಾರ್ವೆಭಾವಿಪಾಳ್ಯ, ಬಸ್ ನಿಲ್ದಾಣ ಹೊಸುರು ಮುಖ್ಯ ರಸ್ತೆಯ, ಸೇವಾ ರಸ್ತೆ ಎರಡು ಬದಿ ಬಂಡೇಪಾಳ್ಯದ ಪಾದಚಾರಿ ಮಾರ್ಗ ಮತ್ತು ಆಂಜನೇಯ ದೇವಸ್ಥಾನ ಗಾರ್ವೆಭಾವಿಪಾಳ್ಯ ಲಕ್ಷ್ಮೀ ಬಡಾವಣೆ ಬದಿಯಲಿಲ ಹೆಚ್ಚಾಗಿ ಪಾದಚಾರಿ ಮಾರ್ಗದಲಿಲ ಮಳಿಗೆಗಳನ್ನು 03 ಪಾಳಿಯಲ್ಲಿ ತಳುವ ಗಾಡಿ ನಿಲ್ಲಿಸಿ ವ್ಯಾಪರ ಮಾಡುತ್ತಿದ್ದು, ಮಳಿಗೆಗಳನ್ನು ತೆರವುಗೊಳಿಸಲು ವಾರ್ಡ್ ಸದ್ಯಸದರಾದ ಶ್ರೀ ಸುರೇಶ್ ರೆಡ್ಡಿ ಮತ್ತು ಇತರರು ಸದ್ಯಸರು ಹಾಗೂ ಸ್ವಯಂ ಸೇವಕರಾದ ಶ್ರೀ ರಾಘವೇಂದ್ರ ರವರು ವಾರ್ಡ್ ಸಭೆಗೆ ಗಮನಕ್ಕೆ ತಂದಿದ್ದುಮ ಈ ಬಗ್ಗೆ ಸಹಾಯಕ ಅಭಿಯಂತರರು ಎಲೆಕ್ಟ್ರಾನಿಕ್ ಸಿಟಿ ಪೋಲಿಸ್ ಠಾಣೆ ಮತ್ತು ಆರಕ್ಷಕ ನಿರೀಕ್ಷಕರಿಗೆ ಹಾಗೂ ಬೇಗೂರು ಪೋಲಿಸ್ ಠಾಣೆ ಆರಕ್ಷಕರ ನಿರೀಕ್ಷಕರಿಗೆ, ಹಿರಿಯ ಆರೋಗ್ಯ ಪರಿವೀಕ್ಷಕರೊಂದಿ ಒಂಟಿ ತಪಾಸಣೆ ಮಾಡಿ ಪಾದಚಾರಿ ಮಾರ್ಗ ತೆರವುಮಾಡಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

2. ವಾರ್ಡ್ ವ್ಯಾಪ್ತಿಯ ಮಂಗಮ್ಮನಪಾಳ್ಯ ಕೆರೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದ್ದು, ಹಾಗೂ ಸದರಿ ಕೆರೆಯಲ್ಲಿ ಭದ್ರತಾ ಸಿಬ್ಬಂದಿಯನ್ನು ನೇಮಿಸಲು ಶ್ರೀ ರಾಘವೇಂದ್ರ ಸ್ವಯಂ ಸೇವಕರು ಸಭೆಗೆ ತಿಳಿಸಿದ್ದು, ಈ ಬಗ್ಗೆ ವಾರ್ಡ್ ಸಹಾಯಕ ಅಭಿಯಂತರರು ರವರು ಕೆರೆಯ ವಿಭಾಗಕ್ಕೆ ಪತ್ರ ಬರೆಯಲಾಗುವುದೆಂದು ಸಭೆಗೆ ತಿಳಿಸಿದರು.

3. ವಾರ್ಡ್ ವ್ಯಾಪ್ತಿಯ ಐ.ಟಿ.ಐ ಬಡಾವಣೆಯ ಉದ್ಯಾನವನದಲ್ಲಿ ಶೌಚಾಲಯವನ್ನು ನಿರ್ಮಿಸುವಂತೆ ಶ್ರೀ ರಾಘವೇಂದ್ರ ಸ್ವಯಂ ಸೇವಕರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಈ ಆರ್ಥಿಕ ವರ್ಷದಲ್ಲಿ ಅನುಮೋದನೆ ಪಡೆದು ಕಾಮಗಾರಿ ಕೈಗೊಳ್ಳಲಾಗುವುದೆಂದು ಸಹಾಯಕ ಅಭಿಯಂತರರು ರವರು ತಿಳಿಸಿದ್ದರು.

**(ಪು.ತಿ.ನೋ)**

Scanned with

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಆಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಆಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಆಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

Scanned with